ದಿನಾಂಕಃ 05.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಆರೋಪಿಯ 2021 ನೇ ಇಸವಿಯಲ್ಲಿ ನಮ್ಮ ಊರಿನಲ್ಲಿ ವಾಸವಿದ್ದರು. ಆನಂತರ ಆರೋಪಿಯು ಬಿದರಹಳ್ಳಿಗೆ ಹೋಗಿ ವಾಸಿಸುತ್ತಿದ್ದಾರೆ. ನಿಪಿ-2 ರಲ್ಲಿನ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ. ದಿ.04.12.2021 ರಂದು ಬೆ.11.00 ಗಂಟೆ ಸಮಯಕ್ಕೆ ಪೋಲಿಸರು ನನಗೆ ನೋಟೀಸು ಕೊಟ್ಟಿದ್ದರು. ಆ ದಿನ ನಾನು ಮತ್ತು ಚಾಸಾ-8 ರವರು ಚಾಸಾ-2 ರವರ ಮನೆಯ ಬಳಿಯೇ ಇದ್ದೆವು. ಆ ದಿನ ಬೆ.11.00 ರ ಸಮಯಕ್ಕೆ ಆ ಸ್ಥಳಕ್ಕೆ ಹೋಗಿದ್ದೆವು. ಸದರಿ ಸ್ಥಳದಲ್ಲಿ ನನ್ನನ್ನು ಮತ್ತು ಚಾಸಾ-8 ರವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಚಾಸಾ-1 ಮತ್ತು 2 ರವರು ದಿನಗೂಲಿ ಕೆಲಸಕ್ಕೆ ಹೋಗುತ್ತಾರೆ. ನಾನು ಸಹಾ ಕೂಲಿ ಕೆಲಸ ಮಾಡುತ್ತೇನೆ. ನಾನು ಮತ್ತು ಚಾಸಾ-2 ರವರು ಬೇರೆ ಬೇರೆ ಕಡೆ ಕೆಲಸ ಮಾಡುತ್ತೇವೆ, ಆದರೆ ಆಗಾಗ ಒಟ್ಟಿಗೆ ಕೆಲಸ ಮಾಡುತ್ತೇವೆ. ನಾನು ಮತ್ತು ಚಾಸಾ-2 ಸ್ನೇಹಿತರು ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ಇಬ್ಬರು ಪೋಲಿಸ್ ಪೇದೆಗಳು ಬೈಕ್ ನಲ್ಲಿ ಬಂದಿದ್ದರು. ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ನೋಟೀಸಿನಲ್ಲಿ ಏನೆಲ್ಲಾ ಬರೆದಿತ್ತು ಎಂದು ನನಗೆ ಮಾಹಿತಿ ಇಲ್ಲ.

ಮಹಜರ್ ನ್ನು ಪೋಲಿಸರೇ ಬರೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಮಹಜರ್ ಗೆ ಕೇವಲ ಒಂದು ಸಹಿ ಪಡೆದಿದ್ದಾರೆ. ಮಹಜರ್ ಬರೆದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಸ್ಥಳದ ಚೆಕ್ಕುಬಂದಿ ನಮೂದಿಸಿರಬಹುದು. ಮಹಜರ್ ಕಾಲಕ್ಕೆ ಪೋಟೋ ತೆಗೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಇದ್ದ ಶೆಡ್ ನಲ್ಲಿ ಸೌದೆ ಇದ್ದವು. ಶೆಡ್ ನ ಯಾವ ದಿಕ್ಕಿಗೆ ಸೌದೆ ಇರಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ ನಕ್ಷೆ ತಯಾರಿಸಿದ್ದಾರೆ. ಆ ನಕ್ಷೆಯಲ್ಲಿ ಸೌದೆ ಇರುವ ಬಾಬ್ತು ನಮೂದಿಸಲಾಗಿದೆಯಾ ಎಂದು ನನಗೆ ಗೊತ್ತಿಲ್ಲ. ಶೆಡ್ ಗೆ ಬಾಗಿಲು ಇರಲಿಲ್ಲ. ಮನೆಯ ಯಾವ ದಿಕ್ಕಿಗೆ ಸದರಿ ಶೆಡ್ ಇತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಶೆಡ್ ಮನೆಗೆ ತಾಗಿಕೊಂಡಿತ್ತು. ನಿಪಿ-2 ರ ನಕ್ಷೆಯಲ್ಲಿ ಮನೆ ಮತ್ತು ಶೆಡ್ ನ್ನು ಬೇರೆ ಬೇರೆಯಾಗಿ ತೋರಿಸಲಾಗಿದೆ ಎಂದರೆ ಸರಿ. ಸದರಿ ಶೆಡ್ 20x30 ಅಡಿ ವಿಸ್ತೀರ್ಣದ್ದಾಗಿರಬಹುದು. ಮಹಜರ್ ನಲ್ಲಿ ಶೆಡ್ ನ ವಿಸ್ತೀರ್ಣವನ್ನು ನಮೂದಿಸಿರಬಹುದು.

ಆ ದಿನ ಹಸಿರು, ಪಿಂಕ್ ಮತ್ತು ಹಳದಿ ಬಣ್ಣದಿಂದ ಕೂಡಿದ ನೈಟಿಯನ್ನು ಪೋಲಿಸರು ವಶಕ್ಕೆ ಪಡೆದರು. ಆಗ ಸಮಯ ಸುಮಾರು ಬೆ.11.45 ರಿಂದ 12.45 ಇರಬಹುದು. ಸದರಿ ನೈಟಿಯು ಶೆಡ್ ನಲ್ಲಿ ಇತ್ತು. ಆ ನೈಟಿಯ ಎಡಭಾಗದ ತೋಳಿನ ಬಳಿ 6-7 ಇಂಚಿನಷ್ಟು ಹರಿದಿತ್ತು. ಈ ವಿಚಾರವನ್ನು ಮಹಜರ್ ನಲ್ಲಿ ನಮೂದಿಸಲಾಗಿದೆ. ಪೋಲಿಸರು ತೆಗೆದ ಪೋಟೋದಲ್ಲಿ ನಾನು, ಚಾಸಾ-1, ಚಾಸಾ-8 ಮತ್ತು ಇಬ್ಬರು ಪೋಲಿಸರು ಇದ್ದೇವೆ. ಪೋಟೊವನ್ನು ಪೋಲಿಸರ ಕ್ಯಾಮೆರಾದಲ್ಲಿ ತೆಗೆಯಲಾಗಿದೆ. ಆ ದಿನ ಒಟ್ಟು ಎರಡು ಪೋಟೋಗಳನ್ನು ತೆಗೆದಿರಬಹುದು. ನಾನು ಹೇಳಿದಂತೆ ಪೋಲಿಸರು ನನ್ನ ಸಮಕ್ಷಮ ಯಾವುದೇ ನೈಟಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಚಾಸಾ-1 ರವರೇ ನನಗೆ ತಿಳಿಸಿದ್ದರು. ನಾನು ಮತ್ತು ಚಾಸಾ-2 ರವರು ಸ್ನೇಹಿತರಾದ

ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.